## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 26-12-2022

### ಮಂಠಾಳ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 111/2022 ಕಲಂ 341, 323, 397, 504, 506 ಜೊತೆ 34 ಐಪಿಸಿ ಹಾಗೂ 25 ಆರ್ಮ್ಸ್ ಆ್ಯಕ್ಟ್ :-

ದಿನಾಂಕ 25/12/2022 ರಂದು 19:00 ಗಂಟೆಗೆ ಫಿರ್ಯಾದಿ ಶ್ರೀ ಸೋನು ತಂದೆ ರಾಮ ನರಸಿಂಗೆ ಸಾ॥ ಎಕ್ಕಂಬಾ ಸದ್ಯ-ಆರ್ಯ ನಗರ ಕಲಬುರ್ಗಿ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಫಿರ್ಯಾದಿಯು ಕಲಬುರಗಿಯ ನೆಹರು ಗಂಜನ ಅಡತಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು ವಾಸವಾಗಿದ್ದು ಸ್ವಂತ ಊರು ಎಕ್ಕಂಬಾ ಇದ್ದು ದಿನಾಂಕ:23/12/2022 ರಂದು ಎಳ್ಳ ಅಮಾವಾಸೆ ಇದ್ದುದರಿಂದ ಮನೆಯವರೆಲ್ಲರೂ ಅಂದು ಊರಿಗೆ ಬಂದು ಹೊಲದಲ್ಲಿ ಊಟ ಮುಗಿಸಿಕೊಂಡು ಸಾಯಂಕಾಲ ತಂದೆಯವರಿಗೆ ಎಕ್ಕಂಬಾದ ನಮ್ಮ ಮನೆಯಲಿಯೇ ಬಿಟ್ಟು ಎಲ್ಲರೂ ಕಲಬುರಗಿಗೆ ಹೋಗಿರುತ್ತಾರೆ ಹೀಗಿರುವಲ್ಲಿ ದಿನಾಂಕ:25/12/2022 ರಂದು ಎಕ್ಕಂಬಾ ಗ್ರಾಮದಲ್ಲಿರುವ ತಂದೆಯವರನ್ನು ಕರೆದುಕೊಂಡು ಹೋಗೋಣ ಅಂತ ಫಿರ್ಯಾದಿಯು ಕಲಬುರಿಗಿಯಿಂದ ಮೊ.ಸೈಕಲ ನಂ.ಕೆಎ-32-ಇವಾಯ್-5671 ನೇದ್ದನ್ನು ಚಲಾಯಿಸಿಕೊಂಡು ಕೋಹಿನೂರ ಮುಖಾಂತರ ಊರಿಗೆ ಬರುವಾಗ ಹಿಂದೆ-ಹಿಂದೆ ಒಂದು ಸಿಲ್ವರ್ ಕಲರ್ ನಂಬರ ಇಲ್ಲದ ಸ್ಪ್ಲೆಂಡರ್ ಮೋಟರ ಸೈಕಲ್ ಮೇಲೆ ಮೂವರು ಹುಡುಗರು ಹಿಂಬಾಲಿಸುತ್ತಾ ಬರುತ್ತಿದ್ದು, ಸಮಯ ಮದ್ಯಾಹ್ನ 12 ಗಂಟೆಯ ಸುಮಾರಿಗೆ ಕೋಹಿನೂರ ಪಹಾಡ ದಾಟಿ ಲಾಡವಂತಿ ಗ್ರಾಮ ಸಮೀಪ ಫಿರ್ಯಾದಿಗೆ ಹಿಂಬಾಲಿಸುತ್ತಿರುವ ಮೋಟರ ಸೈಕಲ್ ಸವಾರರು ಫಿರ್ಯಾದಿಗೆ ಸೈಡ್ ಹೊಡೆದು ಅವರಲ್ಲಿ ಹಿಂದೆ ಕುಳಿತವನು ಅವಾಚ್ಯವಾಗಿ ಬೈದು ಗಾಡಿ ನಿಲ್ಲಿಸು ಅಂತಾ ಅಂದಾಗ ನಾನು ಗಾಬರಿಗೊಂಡು ಹಾಗೆ ಸ್ವಲ್ಪ ಮುಂದೆ ಹೋಗಿ ನನ್ನ ಮೋಟರ ಸೈಕಲ್ ಅನ್ನು ರೋಡಿನ ಸೈಡಿಗೆ ನಿಲ್ಲಿಸುವಾಗ ನಾನು ಕೇಳಗೆ ಬಿದ್ದು ಮೋಟರ ಸೈಕಲ್ ಬಿಟ್ಟು ಓಡುವಾಗ ಫಿರ್ಯಾದಿಗೆ ಹಿಂಬಾಲಿಸುತ್ತಿರುವ ಮೋಟರ ಸೈಕಲ್ ಮೇಲಿನ ಇಬ್ಬರು ಹುಡುಗರು ಬೆನ್ನಟ್ಟಿ ಅವರಲ್ಲಿ ಒಬ್ಬನು ತನ್ನ ಕೈಯಲ್ಲಿ ಕಪ್ಪು ಬಣ್ಣದ ಪಿಸ್ತೂಲ ಹಿಡುದು ನನಗೆ ತೋರಿಸಿ ಅವಾಚ್ಯವಾಗಿ ಬೈದು ಮಗನೆ ನಿಂದುರು ಇಲ್ಲದಿದ್ದರೆ ನಿನಗೆ ಗುಂಡು ಹಾರಿಸುತ್ತೆನೆ ಅಂತಾ ಅಂದು ಅಡ್ಡಗಟ್ಟಿ ನಿಲ್ಲಿಸಿ ಒಬ್ಬನು ಪಿಸ್ತೂಲ ತೋರಿಸಿ, ಇನ್ನೊಬ್ಬನು ತನ್ನ ಕೈಯಲ್ಲಿ ಚಾಕು ಹಿಡಿದುಕೊಂಡು ಹೆದರಿಸಿ ಪಿಸ್ತೂಲ ಹಿಡಿದವನು ನನ್ನ ಪ್ಯಾಂಟ ಮತ್ತು ಶರ್ಟ ಚೆಕ್ ಮಾಡಿ ಪ್ಯಾಂಟ ಕಿಶೆಯಲ್ಲಿದ್ದ ಮೊಬೈಲ್ ರೂ. 10000 ಬೆಲೆಯುಳ್ಳದ್ದು ಮತ್ತು 5000 ರೂ. ಕಸಿದುಕೊಂಡು ಹೊಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.